ಅನುಬಂಧ –2

ಕ್ರಮ ಸಂಖ್ಯೆ	ವಿದ್ಯಾರ್ಥಿ ನಿಲಯದ ಹೆಸರು ಮತ್ತು ಸ್ಥಳ	ಅಂದಾಜು ವೆಚ್ಚ ರೂ ಲಕ್ಷಗಳಲ್ಲಿ	ಕಟ್ಟಡ ಮುಕ್ತಾಯವಾಗಿರುವ ದಿನಾಂಕ
1	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಹುಬ್ಬಳ್ಳಿ	25 77	15 9 2003
2.	ಮೆಟ್ರಿಕ್ ನಂತರ ಬಾಲಕಿಯರ ನಿಲಯ ಹುಬ್ಬಳ್ಳಿ	39 52	15 9 2003
3	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ಹರಳಿಕಟ್ಟೆ	24 54	3 10 2003
4.	ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಿದ್ಯಾರ್ಥಿ ಧಾರವಾಡ	68 24	ಕಾಮಗಾರಿಯು ಮುಕ್ತಾಯವಾಗಿದ್ದು ವಿದ್ಯುತ್‌ಚ್ಛಕ್ತಿ ಸರಬರಾಜು ಪೂರೈಸಬೇಕಾಗಿದೆ
5	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ನೂಲ್ವಿ	17 13	ಕಾಮಗಾರಿಯು ಮುಕ್ತಾಯವಾಗಿದೆ

ಮೀನುಗಾರಿಕೆಯ ಇಲಾಖೆಯಲ್ಲಿ ಉಂಟಾಗಿರುವ ನಷ್ಟ

228 (569) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷಗಳಿಂದ ಮಂಗಳೂರು ಹಾಗೂ ಕಾರವಾರ ಬಂದರುಗಳಲ್ಲಿ ರಾಜ್ಯದ ಸರಕುಗಳನ್ನು ಎಷ್ಟು ಪ್ರಮಾಣದಲ್ಲಿ ರಫ್ತು ಮಾಡಲಾಗಿದೆ ಇದರ ಮೊತ್ತವೆಷ್ಟು

ಆ) ಹೊರದೇಶದಿಂದ ಯಾವ ಪ್ರಮಾಣದಲ್ಲಿ ವಸ್ತುಗಳನ್ನು ವಿದೇಶಿ ಹಡಗುಗಳು ತಂದಿರುತ್ತದೆ ಮೊತ್ತವೆಷ್ಟು

ಇ) ಹಡಗುಗಳಿಂದ ಬಂದ ವಸ್ತುಗಳನ್ನು ಇಳಿಸಲಾಗಿದೆಯೇ ಸರಿಯಾದ ಸಮಯಕ್ಕೆ ಡಿಸ್‌ಎಂಬಾರ್ಡ್‌ಮೆಂಟ್ ಮಾಡದೇ ನಷ್ಟ ಉಂಟಾಗಿದೆಯೆ ಯಾವ ಪ್ರಮಾಣದಲ್ಲಿ

ಈ) ವಿದೇಶದಿಂದ ಹೊತ್ತು ತಂದ ವಸ್ತುಗಳು ಅನುಪಯುಕ್ತವಾಗಿದೆಯೇ ಯಾವ ಪ್ರಮಾಣದಲ್ಲಿ

ಉ) ಕಾರವಾರ ಹಾಗೂ ಮಂಗಳೂರು ಬಂದರಿನಲ್ಲಿ ಯಾವ ಪ್ರಮಾಣದಲ್ಲಿ ಮೀನನ್ನು ರಫ್ತು ಮಾಡಲಾಗಿದೆ ಸರ್ಕಾರಕ್ಕೆ ಎಷ್ಟು ಪ್ರಮಾಣದಲ್ಲಿ ಆದಾಯ ಬಂದಿದೆಯೇ ಮೊತ್ತವಷ್ಟು?

ಶ್ರೀ ವಸಂತ ವಿ ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ) ಹಳೇ ಮಂಗಳೂರು ಬಂದರು (ಹಡಗುಗಳ ಮುಖಾಂತರ)

ವರ್ಷ	ರಫ್ತಾದ ಸರಕಿನ ಪ್ರಮಾಣ	ರಫ್ತಾದ ಸರಕಿನ ಮೌಲ್ಯ (ರೂ)
2001–02	1,38,986M T	15,26 66 066
2002–03	1,02,905M T	47,76,74,136

ಕಾರವಾರ ಬಂದರು (ಹಡಗುಗಳ ಮುಖಾಂತರ)

2001–02	3 00,689M T	187,96,13,513
2002–03	2 80,573M T	1,47,16,29,580

ಆ) ಕಾರವಾರ ಬಂದರು

ವರ್ಷ	ರಫ್ತಾದ ಸರಕಿನ ಪ್ರಮಾಣ	ಆಮದಾದ ಸರಕಿನ ಮೌಲ್ಯ (ರೂ)
2001–02	1 72 069M T	115,76,32,380
2002–03	1,81,611M T	136 23,13,950

ಮಂಗಳೂರು ಬಂದರು

ಹಳೇ ಮಂಗಳೂರು ಬಂದರಿಗೆ ಹೊರ ದೇಶದಿಂದ ಯಾವುದೇ ಹಡಗುಗಳು ಬಂದಿರುವುದಿಲ್ಲ

ಇ) ಹೌದು

ಇಲ್ಲ

ಉದ್ಭವಿಸುವುದಿಲ್ಲ

ಈ) ಇಲ್ಲ

ಉದ್ಭವಿಸುವುದಿಲ್ಲ

ಉ) ಕಾರವಾರ ಬಂದರಿನಿಂದ 2001–02 ರ ಸಾಲಿನಲ್ಲಿ 2,206 ಮೀನನ್ನು ರಫ್ತು ಮಾಡಲಾಗಿದೆ ಇದರಿಂದ ಬಂದರು ಇಲಾಖೆಗೆ ರೂ 6 47,329 ಆದಾಯ ಬಂದಿರುತ್ತದೆ

ರೂ 6,47,329 ಆದಾಯ ಬಂದಿರುತ್ತದೆ

ಹಳೇ ಮಂಗಳೂರು ಬಂದರಿನಿಂದ ಮೀನನ್ನು ರಫ್ತು ಮಾಡಲಾಗಿರುವುದಿಲ್ಲ

ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮಣಿಕೆ ಕೈಗಾರಿಕೆ

229 (571) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷದಿಂದ ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮವಾಗಿ ಎಷ್ಟು ಗಣಿ ಕೈಗಾರಿಕೆಗಳನ್ನು ಪ್ರಾರಂಭಿಸಿದ್ದಾರೆ ಅವರ ಮೇಲೆ ಯಾವ ರೀತಿಯ ಕ್ರಮ ಜರುಗಿಸಿದ್ದೀರಿ

ಆ) ಖಾಸಗಿ ಭೂಮಿಯಲ್ಲಿ ಎಷ್ಟು ಗಣಿ ಕೈಗಾರಿಕೆಗಳು ಪ್ರಾರಂಭವಾಗಿವೆ, ಅವು ಯಾವುವು

ಇ) ಅಕ್ರಮವಾಗಿ ಗಣಿ ಕೈಗಾರಿಕೆಗಳು ನಡೆಯುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಆದಾಯ ನಷ್ಟ ಉಂಟಾಗಿದೆ ಇದನ್ನು ತಪ್ಪಿಸಲು ಸರಕಾರವು ತೆಗೆದುಕೊಂಡಿರುವ ಕ್ರಮವೇನು